ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 5, November - December 2024, Pp. 49-55
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಬಸವಣ್ಣನವರಲ್ಲಿ ಅಲ್ಲಾಹನನ್ನು ಕಂಡ ಫೈಮುದಾ ಫಾತಿಮಾ

**ಲಕ್ಷ್ಮಿದೇವಿ ಎನ್[1] ಮತ್ತು ಡಾ. ಕೆಂಗಲ್‌ಮೂರ್ತಿ ಕೆ.ಜೆ[2]**

[1]ಸಂಶೋಧನಾ ವಿದ್ಯಾರ್ಥಿ, ಸಿ.ಎಂ.ಆರ್. ವಿಶ್ವವಿದ್ಯಾನಿಲಯ, ಬೆಂಗಳೂರು., ಹಾಗೂ
ಕನ್ನಡ ಸಹಾಯಕ ಪ್ರಾಧ್ಯಾಪಕರು, ನಾಗಾರ್ಜುನ ಕಾಲೇಜ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್, ಚಿಕ್ಕಬಳ್ಳಾಪುರ.
[2] ಸಹಾಯಕ ಪ್ರಾಧ್ಯಾಪಕರು, ಸ್ಕೂಲ್ ಆಫ್ ಲಿಬರಲ್ ಸ್ಟಡೀಸ್, ಸಿ.ಎಂ.ಆರ್. ವಿಶ್ವವಿದ್ಯಾಲಯ, ಬೆಂಗಳೂರು.

**Abstract:**

*ಸರ್ವಧರ್ಮ ಸಮಭಾವ ಎನ್ನುವ ಭಾವನೆ ಭಾರತದಲ್ಲಿದೆ. ಜಾತ್ಯತೀತ ದೇಶವಾದ ಭಾರತದಲ್ಲಿ ಅನೇಕ ಮಹನೀಯರು ಜನ್ಮತಾಳಿ ಭಾರತದ ಕೀರ್ತಿ ಪತಾಕೆಯನ್ನು ವಿಶ್ವಕ್ಕೆ ಹಾರಿಸಿದ್ದಾರೆ. ಅದರಲ್ಲಿ ಬಸವಣ್ಣನವರು ಒಬ್ಬರು ವಿಶ್ವ ಮಾನವತವಾದಿ, ಕ್ರಾಂತಿಕಾರಿ, ಸಮಾಜ ಸುಧಾರಕ, ಜಗಜ್ಯೋತಿಯಾದ ಈತನ ಪ್ರಭಾವಕ್ಕೆ ಒಳಗಾಗದವರೇ ಇಲ್ಲ. 12ನೇ ಶತಮಾನದ ಬಸವಣ್ಣ ಸಮಾಜ ಸುಧಾರಕರಿಗೆ ಪ್ರೇರಣೆ. ಜೊತೆಗೆ ಮನದ ಅಂಧಕಾರ ನಿವಾರಣೆ, ಮೌಢ್ಯತೆಯ ನಿವಾರಣೆ, ಕಾಯಕ, ದಾಸೋಹ, ವೈಚಾರಿಕತೆಗೂ ಪ್ರೇರಕರಾಗಿದ್ದಾರೆ. ಇವರ ತತ್ವಗಳಿಗೆ ಪರವಶರಾದವರು ಕೇವಲ ಹಿಂದೂ, ಜೈನ, ಬೌದ್ಧ ಧರ್ಮೀಯರು ಮಾತ್ರವಲ್ಲ. ಕ್ರೈಸ್ತರು ಮುಸಲ್ಮಾನರು ಕೂಡ. ಅದರಲ್ಲೂ ಕರ್ನಾಟಕದಲ್ಲಿ ಮುಸಲ್ಮಾನ ತತ್ವಪದಕಾರರು ತಮ್ಮ ತತ್ವಪದಗಳಲ್ಲಿ ಹೆಚ್ಚಾಗಿ ಬಸವಣ್ಣನವರನ್ನು ಸ್ಮರಿಸಿದ್ದಾರೆ. ಅವರಲ್ಲಿ ಒಬ್ಬರು ಫೈಮುದಾ ಫಾತಿಮಾ. ಇವರು ಉತ್ತರ ಕರ್ನಾಟಕದ ಬಸವ ಕಲ್ಯಾಣದವರು. ಇವರ ಕಾಲ 1930–40ರ ಅಸುಪಾಸು. ಉತ್ತರ ಕರ್ನಾಟಕವು ಶಿವಶರಣರ ಕ್ರಾಂತಿಗೆ ತವರು ಮನೆಯಾದಂತೆ, ಸೂಫಿ ಸಂತರ ಜನ್ಮ ಸ್ಥಳವೂ ಹೌದು. ಇಂತಹ ಸೂಫಿ ಪರಂಪರೆಯ ತತ್ವಪದಕಾರರಲ್ಲಿ ಫಾತಿಮಾಳು ಒಬ್ಬರು. ಅಂಧಕಾರದ ಸಮಾಜದಲ್ಲಿದ್ದ ಮೌಢ್ಯವನ್ನು ತೊಡೆದು ಹಾಕಲು ಅಕ್ಷರಜ್ಞಾನ ಹಾಗೂ ಬಡತನ ನಿವಾರಣೆಗೆ ಕಾಯಕ ದಾಸೋಹವನ್ನು ಸಮಾಜಕ್ಕೆ ತಿಳಿಸಿದ ಬಸವಣ್ಣನವರನ್ನು ಫೈಮುದಾ ಫಾತಿಮಾ ಅಲ್ಲಾ ಎಂದಿದ್ದಾಳೆ.*

**Keywords:** *ಶಿವಶರಣರು, ಅಲ್ಲಾಹ, ಬಸವಣ್ಣ, ಕಾಯಕ, ದಾಸೋಹ, ಫೈಮುದಾ ಫಾತಿಮಾ.*

## ಪೀಠಿಕೆ

ಸರ್ವಧರ್ಮ ಸಮಭಾವ ಎನ್ನುವುದು ಭಾರತೀಯ ಸಮಾಜದ ಪ್ರಮುಖ ಕಲ್ಪನೆಯಾಗಿದ್ದು ಇದು ಎಲ್ಲಾ ಧರ್ಮಗಳಿಗೆ ಸಮಾನ ಗೌರವ ಎನ್ನುವ ಅರ್ಥವನ್ನು ನೀಡುತ್ತದೆ. ಇದು ಎಲ್ಲಾ ಧರ್ಮವೂ ಒಂದೇ ಎಂಬುದನ್ನು ತಿಳಿಸುತ್ತದೆ. ಏಕತೆಯಿಂದ ಬಾಳಬೇಕು ಮತ್ತು ಸತ್ಯದ ಮಾರ್ಗದಲ್ಲಿ ನಡೆಯಬೇಕೆನ್ನುವ ನಂಬಿಕೆಯನ್ನು ಒತ್ತಿ ಹೇಳುತ್ತದೆ. ಪ್ರಪಂಚದಲ್ಲಿನ ಪ್ರತಿಯೊಂದು ಧರ್ಮವೂ ತನ್ನದೇ ಆದ ವಿಶಿಷ್ಟ ಮೌಲ್ಯಗಳನ್ನು ಮತ್ತು ಕೊಡುಗೆಗಳನ್ನು ನೀಡುತ್ತದೆ. ಒಂದು ಧರ್ಮಕ್ಕಿಂತ ಇನ್ನೊಂದು ಧರ್ಮ ಶ್ರೇಷ್ಠವಲ್ಲ ಅಂತಹ ಧರ್ಮ ಭೂಮಿಯ ಮೇಲೆ ಯಾವುದೂ ಇಲ್ಲ. ಭಾರತವನ್ನು

**Please cite this article as:** ಲಕ್ಷ್ಮಿದೇವಿ ಎನ್. (2024). ಬಸವಣ್ಣನವರಲ್ಲಿ ಅಲ್ಲಾಹನನ್ನು ಕಂಡ ಫೈಮುದಾ ಫಾತಿಮಾ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(5), 49–55

ವಿವಿಧತೆಯಲ್ಲಿ ಏಕತೆ, ಏಕತೆಯಲ್ಲಿ ಸಮಾನತೆಯನ್ನು ಎತ್ತಿ ಹಿಡಿದ ರಾಷ್ಟ್ರವೆಂದು ವರ್ಣಿಸಲಾಗುತ್ತದೆ. ಭಾರತವು ವಿವಿಧ ಧರ್ಮಗಳನ್ನು ವಿವಿಧ ಸಂಸ್ಕೃತಿ ಹಾಗೂ ಸಂಪ್ರದಾಯಗಳನ್ನು ಅನುಸರಿಸುವ ದೇಶವಾಗಿದೆ. ಇಲ್ಲಿ ಎಷ್ಟೇ ಕೋಮು ಗಲಭೆಗಳು ನಡೆದರೂ ಅದು ಕೇವಲ ಒಂದಿಷ್ಟು ಸಮಯದವರೆಗೆ ಮಾತ್ರ ಇದ್ದು ಆ ನಂತರದಲ್ಲಿ ಎಲ್ಲಾ ಒಂದೇ ಎನ್ನುವ ಭಾವನೆಯಿಂದ ಬದುಕುತ್ತಾರೆ.[1]

ಕಾಯಕ ಹನ್ನೆರಡನೇ ಶತಮಾನದ ಬಸವಾದಿ ಶಿವಶರಣರಿಂದ ವಿಶಾಲಾರ್ಥವನ್ನು ಪಡೆದುಕೊಂಡು ಚಲಾವಣೆಯಲ್ಲಿ ಬಂದ ಪದ. ಈ ಪದವು ಸಂಸ್ಕೃತ ಮೂಲವಾದರೂ ಕನ್ನಡದಲ್ಲಿ ಶಿವಶರಣರಿಂದ ವಿಶೇಷ ಅರ್ಥ ವ್ಯಾಪ್ತಿಯನ್ನು ಹೊಂದಿ ನೆಲೆ ನಿಂತಿದೆ. ಸಾಮಾನ್ಯ ಅರ್ಥದಲ್ಲಿ ಕಾಯಕ ಎಂದರೆ ದುಡಿಮೆ ಎಂದೇ ಅರ್ಥ. ಬಸವಾದಿ ಶರಣರು ನಿತ್ಯದ ದುಡಿಮೆಯನ್ನು ಉತ್ಕೃಷ್ಟಗೊಳಿಸಿ ಉದಾತ್ತೀಕರಿಸಿ ಕಾಯಕವಾಗಿಸಿದ್ದಾರೆ. ಧರ್ಮ ಮಾರ್ಗದ ಗಳಿಕೆಯು ಸದ್ಬಳಕೆಗೆ ವ್ಯಯವಾಗಬೇಕು. ಅಧರ್ಮ ಮಾರ್ಗದ ಗಳಿಕೆಯು ಸತ್ಪಾತ್ರದ ವ್ಯಯಕ್ಕೆ ಸಲ್ಲದು ಸಂಪತ್ತನ್ನು ಅನೈತಿಕತೆಗೆ ಅಪವ್ಯಯ ಮಾಡ ಕೂಡದು. ಆಡಂಬರಕ್ಕಾಗಿ ಅನಗತ್ಯವಾದ ವ್ಯಯ ಮಾಡಕೂಡದು. ಇಂದು ಪ್ರತಿಯೊಬ್ಬ ವ್ಯಕ್ತಿ ಪ್ರತಿಯೊಂದು ಸಮಾಜ, ಪ್ರತಿಯೊಂದು ದೇಶ ಅಷ್ಟೇ ಏಕೆ? ಇಡೀ ವಿಶ್ವದ ಎಲ್ಲಾ ಜನಾಂಗಗಳು ಶರಣರು ಸಂತರು ತೋರಿಸಿದ ಈ ಮಾರ್ಗದಲ್ಲಿ ನಡೆದು ತಮ್ಮ ಆತ್ಮವಿಮರ್ಶೆ ಮಾಡಿಕೊಂಡಿದ್ದಾರೆ. ಫೈಮುದಾ ಫಾತಿಮಾ ಅನ್ಯ ಧರ್ಮೀಯಳಾದರೂ ಬಸವಣ್ಣನವರ ವಚನಗಳ ಸಾರವನ್ನು ಹನ್ನೆರಡನೇ ಶತಮಾನದ ಸಾಮಾಜಿಕ ಸುಧಾರಣೆಯನ್ನು ಅರಿತವಳಂತೆ ಕಾಣುವಳು.

ಬಸವಕಲ್ಯಾಣದ ಫೈಮುದಾ ಫಾತಿಮಾ 1930–40ರ ಆಸುಪಾಸಿನಲ್ಲಿ ತಂದೆ ಬಿಸ್ಮಿಲ್ಲಾ ಖಾನ್ ತಾಯಿ ಇಸಸ್ಮೈಲಬೀ ರವರಿಗೆ ಜನಿಸಿದರು. ಪತಿ ಮುಸ್ಯಾರುದ್ದೀನ್. ಈಕೆಗೆ 5 ಹೆಣ್ಣು 3 ಗಂಡು ಮಕ್ಕಳು. ಬೇರೆಯವರ ಮನೆಗಳಲ್ಲಿ ಮನೆಗೆಲಸ ಮಾಡುವ ಕಾಯಕ ಈಕೆಯದು. ಶಾಲೆಯ ಮುಖ ನೋಡದಿದ್ದರೂ, ಬಡತನದ ಬೇಗೆಯಲ್ಲಿ ದಿನ ನೂಕಿದರೂ ***ನಾ, ನೀ ಎಂಬ ಭೇದ ಅಂದಿಲ್ಲ ಇಂದಿಲ್ಲ, ಬಸವಣ್ಣನ ನಾಮ ರೋಜಿನ ಹಾಡು*** ಎಂಬಂತಹ ಪದಗಳನ್ನು ಬರೆದಿದ್ದಾಳೆ. ಹಾಡುಗಾರ್ತಿಯಾಗಿದ್ದ ಈಕೆ ಮನೆಗೆಲಸ ಮಾಡುತ್ತಲೇ ಹಾಡುತ್ತಿದ್ದಳಂತೆ. ಉತ್ತರ ಕರ್ನಾಟಕ ಶಿವಶರಣರ ಕ್ರಾಂತಿಗೆ ತವರು ಮನೆಯಾದಂತೆ ಸೂಫಿ ಸಂತರ ಆಡೊಂಬಲವೂ ಆಗಿದೆ. ಈಕೆ ಬದುಕಿರುವ ವರೆಗೂ ಕವಯತ್ರಿ ಎಂದು ಗುರುತಿಸಲು ಸಾಧ್ಯವಾಗಿರಲಿಲ್ಲ. ಇವಳ ಬಾಯಿಂದ ಕೇಳಿದ ಅವರಿವರು ಬರೆದುಕೊಂಡಿರುವ 8 ಪದಗಳು ಮಾತ್ರ ಸದ್ಯ ಉಳಿದುಕೊಂಡಿವೆ. ಈಕೆಯು ಎಷ್ಟು ಪದ ಬರೆದಿದ್ದಳು ಎಂಬುದು ಯಾರಿಗೂ ತಿಳಿದಿಲ್ಲದಿರುವುದು ವಿಪರ್ಯಾಸವೇ ಸರಿ. ***"ಅಲ್ಲಾ ಹೋ ಅಕ್ಬರ್ ಅನತಿಯಾಕ ಅಲ್ಲಾನ ದಿಲ್ ನೀ ತಿಳಕೊಂಡಿಲ್ಲ ಯಾಕ ಎನ್ನುವ" ವೈಚಾರಿಕತೆ, "ತಲಾಕ್ ತಲಾಕ್ ತಲಾಕ್ ಎಂದೆ ಸಂಸಾರದಿಂದ ಖುಲ್ಲಾಸ್ ಆದೆ"*** ಎನ್ನುವ ಈ ತತ್ವಪದವು ಫಾತಿಮಾಳ ಮನಸ್ಸಿನ ಅಂತರಾಳದಿಂದ ಬಂದಿದೆ. ಮನಸ್ಸಿನಲ್ಲಿ ಪದ ಕಟ್ಟಿ ಆಡಿರುವುದನ್ನು ಈಕೆಯ ತತ್ವಪದಗಳಲ್ಲಿ ಕಾಣಬಹುದು. ಈಕೆಯಲ್ಲಿದ್ದ ಧಾರ್ಮಿಕ ವೈಚಾರಿಕತೆ ಮತ್ತು ಕಾಯಕ, ದಾಸೋಹಗಳ ಬಗ್ಗೆ ಇದ್ದ ಅರಿವು, ಅಕ್ಷರಸ್ಥ ಸಮಾಜದಲ್ಲಿ ಇಲ್ಲದಿರುವುದು ವಿಪರ್ಯಾಸವೇ ಸರಿ.

***ಧರಿಯ ಮ್ಯಾಲಿನ ಗಾಂವ ಕಲ್ಯಾಣ।***
***ದೊರೆ ಬಸವನ ಬೇಟಿ ನಾ ಫಾತಿಮಾ;***
***ಹಾಡಿ ನಾ ಪದವ ಆತ ಕಲ್ಯಾಣಿ ಗುರುವಿನಿಂದ।***

ಎನ್ನುವ ತತ್ವಪದದಲ್ಲಿ ತನ್ನ ಗುರು ಉರ್ದು ಕವಿ ಕಲ್ಯಾಣಿ ಎಂದಿದ್ದಾಳೆ.

***ಬಸವಣ್ಣವೆಂಬವ ಅಲ್ಲಾ ನೋಡು।***
***ಅಲ್ಲಾ ಯಾಕೆಂದರ ಹೇಳತಿನಿ ಕೇಳು***
***ಖಾನಾ ಇಲ್ಲದವರಿಗೆ ಖಾನಾ ಕೊಟ್ಟ***

[1] ವಿಜಯ ಕರ್ನಾಟಕ ಪತ್ರಿಕೆ (2024, ಏಪ್ರಿಲ್ 25)

ಖೂನಾ ಇಲ್ಲದವರಿಗೆ ಜ್ಞಾನ ಕೊಟ್ಟ ಎಂಬ ಸಾಲುಗಳು ಬಸವಣ್ಣನನ್ನು ಅಲ್ಲಾನೇ ಎನ್ನುತ್ತಾಳೆ. ಅಲ್ಲಾನಿಗೆ ಹೋಲಿಕೆ ಮಾಡಲು ಕಾರಣವೇನೆಂದರೆ, ಅಂಧಕಾರದಲ್ಲಿದ್ದ ಸಮಾಜದಲ್ಲಿ ಮೌಢ್ಯವನ್ನು ತೊಡೆದು ಹಾಕಲು ಅಕ್ಷರಜ್ಞಾನ ಹಾಗೂ ಬಡತನ ನಿವಾರಣೆಗೆ ಕಾಯಕ ದಾಸೋಹವನ್ನು ಸಮಾಜಕ್ಕೆ ತಿಳಿಸಿದವನು ಎಂದು ಹೇಳುವ ಮೂಲಕ ಬಸವಣ್ಣನನ್ನು ಅಲ್ಲಾ ಎಂದಿದ್ದಾಳೆ.

ಅವಳು ಬರೆದ ಹಾಡುಗಳು ಮನಕ್ಕಂಟಿದ ಸೂತಕವನ್ನು ತೊಳೆದು ಹಾಕುತ್ತವೆ. ಬಸವಣ್ಣನೆಂಬುವನೇ ಅಲ್ಲಾ ನೋಡು ಎನ್ನುತ್ತಾಳೆ. *ಅಲ್ಲಾ ಹೊರಗಿಲ್ಲ ಒಳಗ್ಹಾನಾ ಅಂದ ಮಂದಿರ ಮಸೀದಿ ಒಡಕೋತ ನಡದ ದ್ಯಾಹಕ ಮಂದಿರ ಮಾಡಿಯೇ ಬಿಟ್ಟ ಅಲ್ಲಾಹಗ ಅದರೊಳಗ ಹುಡಿಕಿಕೊಟ್ಟ.* ಭೌತಿಕ ಕಟ್ಟಡಗಳಲ್ಲಿ ಅಲ್ಲಾ ಮತ್ತು ದೇವರಿಲ್ಲ ದೇಹವೇ ದೇವಾಲಯ ಎಂದು ಹೇಳಿದ ಬಸವಣ್ಣನು ಅದರಲ್ಲಿಯೇ ಅಲ್ಲಾಹನಿಗೆ ಹುಡುಕಿಕೊಟ್ಟ ಎಂಬ ಫಾತಿಮಾಳ ಜ್ಞಾನವು ಎಂದೂ ಬತ್ತದ ಝರಿಯಾಗಿದೆ.[2]

***ವ್ಯಾಸ ಬೋಯಿತಿಯ ಮಗ***
***ಮಾರ್ಕಂಡೇಯ ಮಾತಂಗಿಯ ಮಗ***
***ಮಂಡೋದರಿ ಕಪ್ಪೆಯ ಮಗಳು***
***ಕುಲವನರಸದಿರಿ ಭೋ***
***ಕುಲದಿಂದ ಮುನ್ನೇನಾದಿರಿ ಬೋ***

***ಸಾಕ್ಷಾತ್ ಅಗಸ್ತ್ಯ ಕಬ್ಬಿಲ***
***ದೂರ್ವಾಸ ಮಚ್ಚಿ***
***ಕಶ್ಯಪ ಕಮ್ಮಾರ***
***ಕೌಂಡಿನ್ಯನೆಂಬ ಋಷಿ***
***ಮೂರು ಲೋಕವರಿಯೆ ನಾವಿದ ಕಾಣಿ ಬೋ***
***ನಮ್ಮ ಕೂಡಲ ಸಂಗನ ವಚನವಿಂತೆಂದುದು***
***ಶ್ವಪಚೋಚಿಯಾದರೇನು ಶಿವಭಕ್ತನೇ ಕುಲಜಂ ಭೋ***

ಬಸವಣ್ಣನ ಈ ವಚನವು ವೇದವನ್ನು ರಚಿಸಿದ ಋಷಿಗಳು ಹಿಂದೂ ಧರ್ಮದ ಪವಿತ್ರ ಗ್ರಂಥಗಳನ್ನು ರಚಿಸಿದ ಋಷಿಗಳು ದೈವಾಂಶ ಸಂಭೂತರಾದ ಋಷಿಗಳೆಲ್ಲರೂ ಶೂದ್ರರೇ ಆಗಿರುವಾಗ ಇಲ್ಲಿ ಮೇಲು ಕೀಳು ಎಂಬ ಪ್ರಶ್ನೆಯೇ ಇಲ್ಲವೆನ್ನುತ್ತಾನೆ. ಅದಕ್ಕೆ ಪ್ರತಿಯಾಗಿ ಫಾತಿಮಾಳು ***"ನಾ ನೀ ಅಂಬ ಭೇದ ಅಂದಿಲ್ಲ ಇಂದಿಲ್ಲ ಭೇದ ಮಾಡಿದರ ಶಾಂತಿ ನಿನಗಿಲ್ಲ ಶಾಂತಿ ನಿನಗಿಲ್ಲ ಖುದಾನ ಹಾದಿ ತಿಳಿದಿಲ್ಲ"*** ಎನ್ನುತ್ತಾಳೆ. ಬಸವಣ್ಣನೆಂಬುವನೇ ಅಲ್ಲಾ ನೋಡು ಎನ್ನುತ್ತಾಳೆ.

***ಬಸವಣ್ಣನ ನಾಮ ರೋಜಿನ ಹಾಡು।***
***ಬಸವಣ್ಣ ಗುಣ ಪಡಕೋ ನೋಡು॥***

ವಿಶ್ವ ಸಂಸ್ಕೃತಿಗೆ ಬಸವಣ್ಣ ಕೊಟ್ಟ ಅದ್ವಿತೀಯ ಕೊಡುಗೆಯೆಂದರೆ ದಾಸೋಹದ ಪರಿಕಲ್ಪನೆ ಇದು ಒಂದು ರೀತಿಯಲ್ಲಿ ಜಗತ್ತಿನ ಎಲ್ಲಾ ಧರ್ಮಗಳಲ್ಲಿ ಆಚರಣೆಯಲ್ಲಿದ್ದರೂ ಇದರ ಸ್ಪಷ್ಟ ಪರಿಕಲ್ಪನೆ ಮೂಡಿಬಂದದ್ದು ಹನ್ನರಡನೆಯ ಶತಮಾನದಲ್ಲಿ.

***ಮಾಡುವಾತ ನಾನಲ್ಲಯ್ಯ ನೀಡುವಾತ ನಾನಲ್ಲಯ್ಯ***
***ಬೇಡುವಾತ ನಾನಲ್ಲಯ್ಯ ನಿಮ್ಮ ಕಾರುಣ್ಯವಲ್ಲದೆ,***
***ಎಲೆ ದೇವಾ ಮನೆಯ ತೊತ್ತು ಅಲಸಿದಡೆ, ಒಡತಿ***
***ಮಾಡಿಕೊಂಬಂತೆ, ನಿನಗೆ ನೀ ಮಾಡಿಕೊ, ಕೂಡಲಸಂಗಮದೇವಾ॥***

ಎಂಬ ಬಸವಣ್ಣನವರ ವಚನದಲ್ಲಿ ಈ ಭಾವ ಅಡಗಿದೆ. ದಾಸೋಹ ಪ್ರಕ್ರಿಯೆಯಲ್ಲಿ ಮಾಡುವವನೂ ಮಾಡಿಸಿಕೊಂಬುವವನೂ ಒಬ್ಬನೇ. ತೆಗೆದುಕೊಳ್ಳುವವ ಪರಮಾತ್ಮನ ಒಂದು ರೂಪವಾದರೆ, ಕೊಡುವವನು ಇನ್ನೊಂದು ರೂಪ ಕೊಡುವ ಸೋತು ಕೊಡುವವನದಲ್ಲ. ಅದು ಪರಮಾತ್ಮನದೇ. ತೆಗೆದು ಕೊಡುವವನೂ ಪರಮಾತ್ಮನಾಗಿರುವುದರಿಂದ ಅದು ಅವನಿಗೆ ಭಕ್ತಿಶ್ರದ್ಧೆಯಿಂದ ಸಲ್ಲಬೇಕು. ಪೂಜ್ಯ ಶ್ರೀ ಶರಣಬಸಪ್ಪ ಅಪ್ಪ ಅವರು ತಮ್ಮ ಒಂದು ದಾಸೋಹ ಸೂತ್ರದಲ್ಲಿ ಹೇಳುವಂತೆ ತಾನಿಲ್ಲದೆ ಭಕ್ತಿ ಶ್ರದ್ಧೆಯಿಂದ

[2] ವಾರ್ತಾ ಭಾರತಿ ಪತ್ರಿಕೆ. (2023, ಸೆಪ್ಟೆಂಬರ್ 31)

ಮಾಡುವುದೇ ದಾಸೋಹ. ಕೊಡುವುದರಲ್ಲಿ ತಾನು ಅಂದರೆ ಅಹಂಭಾವ ಶ್ರೀಮಂತಿಕೆಯ ದರ್ಪವಿದ್ದರೆ ಅದು ದಾನವಾಗುತ್ತದೆ. ಅಹಂಭಾವವಿಲ್ಲದೆ ದೇವರ ಸೊತ್ತನ್ನು ದೇವರಿಗೆ ಅರ್ಪಿಸುತ್ತಿದ್ದೇನೆಂದು ಭಾವಿಸಿದರೆ ಅದು ದಾಸೋಹವಾಗುತ್ತದೆ.

ಸಮಾಜದಲ್ಲಿ ಪ್ರತಿಯೊಬ್ಬರೂ ಜೀವನಾಧಾರಕ್ಕಾಗಿ ಯಾವುದಾದರೊಂದು ವೃತ್ತಿಯನ್ನು ಅನುಸರಿಸಲೇಬೇಕು ಕೇವಲ ಹೊಟ್ಟೆಪಾಡಿಗಾಗಿ ಮಾಡುವ ಕೆಲಸ ವೃತ್ತಿಯೆಸಿಸಿದರೆ, ಮಾಡುವ ಕೆಲಸವೇ ಈಶ್ವರ ಪೂಜೆಯೆಂದು ಸಮರ್ಪಣ ಭಾವನೆಯಿಂದ ಮಾಡಿದರೆ ಅದು ಕಾಯಕವೆನಿಸುತ್ತದೆ. ಪ್ರತಿಯೊಬ್ಬರೂ ತಮ್ಮ ಕೆಲಸವನ್ನು ಈಶ್ವರ ಪೂಜೆಯೆಂದೇ ಮಾಡಬೇಕು. ಕಾಯಕದಿಂದ ಗಳಿಸಿದ ಹಣ ತನ್ನೊಬ್ಬನ ಸೊತ್ತಲ್ಲ. ಜಂಗಮ ದಾಸೋಹಕ್ಕಾಗಿ ಅಂದರೆ ಸಮಾಜಕ್ಕಾಗಿ ವಿನಿಯೋಗಿಸಬೇಕು. ಮಾನವ ದೇಹವೆಂಬುದು ಪರಮಾತ್ಮನು ತನ್ನನ್ನು ತಾನು ಪ್ರಕಟಿಸಲಿಕ್ಕೆ ನಿರ್ಮಿಸಿದ ಪ್ರಯೋಗ ಶಾಲೆ ಕಾರಣ ಅದನ್ನು ಕಡೆಗಣಿಸುವಂತಿಲ್ಲ. ಅಲ್ಲಗಳೆಯುವಂತಿಲ್ಲ. ಈ ಪ್ರಯೋಗ ಶಾಲೆಯಲ್ಲಿ ಕ್ಷಣ ಕ್ಷಣಕ್ಕೂ ಒಳಿತು–ಕೆಡುಕುಗಳ, ಸತ್ಯಾಸತ್ಯತೆಗಳ ಸಂಘರ್ಷಣೆ ನಡೆದು ಕೊನೆಗೆ ಸತ್ಯಕ್ಕೆ ಜಯವಾದಾಗ ಕಾಯ ಸಾರ್ಥಕತೆಯನ್ನು ಪಡೆಯುತ್ತಾನೆ.

***ಸರ್ವಜ್ಞ ತನ್ನ ಒಂದು ವಚನದಲ್ಲಿ ಹೇಳಿರುವಂತೆ***
***ಅನ್ನವನ್ನು ಇಕ್ಕವುದು ನನ್ನಿಯನು ನುಡಿಯವದು***
***ತನ್ನಂತೆ ಪರರ ಬಗೆದಡೆ ಕೈಲಾಸ***
***ಬಿನ್ನಾಣವಕ್ಕು ಸರ್ವಜ್ಞ***

ಪರೋಪಕಾರ ಬುದ್ಧಿಯಿಂದ ಹಸಿದವರಿಗನ್ನವನ್ನಿಕ್ಕಿ ಸತ್ಯವೇ ದೇವರೆಂದು ನಂಬಿ ದಿಟವನ್ನು ನುಡಿದು, ನುಡಿದಂತೆ ನಡೆದು ಇತರರ ಕಷ್ಟಕಾರ್ಪಣ್ಯಗಳನ್ನು ತಮ್ಮದೆಂದು ಭಾವಿಸಿಕೊಂಡು ಅವುಗಳನ್ನು ನಿವಾರಿಸಿದರೆ ಅದರಲ್ಲಿಯೇ ಕೈಲಾಸವನ್ನು ಕಾಣಬಹುದೆಂಬ ಮಾತು ವಾಸ್ತವಿಕತೆಗೆ ಎಷ್ಟು ಹತ್ತಿರವಾಗಿದೆ ಎಂಬುದನ್ನು ನಾವು ಕಂಡು ಕೊಳ್ಳಬಹುದಾಗಿದೆ.

***ಬಸವಣ್ಣನೆಂಬವ ಅಲ್ಲಾ ನೋಡು।***
***ಅಲ್ಲಾ ಯಾಕೆಂದರ ಹೇಳತಿನಿ ಕೇಳು***
***ಖಾನಾ ಇಲ್ಲದವರಿಗೆ ಖಾನಾ ಕೊಟ್ಟ***
***ಖೂನಾ ಇಲ್ಲದವರಿಗೆ ಜ್ಞಾನ ಕೊಟ್ಟ॥***

ಫೈಮುದಾ ಫಾತಿಮಾ ಹೇಳುವಂತೆ ಪವಿತ್ರ ಕುರಾನ್ ಹಲವು ಸ್ಥಳಗಳಲ್ಲಿ ದಾನ ಧರ್ಮದ ಪ್ರಾಧಾನ್ಯತೆಯನ್ನು ಒತ್ತಿ ಹೇಳುತ್ತದೆ. ಅಲ್ಲಾಹನ ಮಾರ್ಗದಲ್ಲಿ ಧನ ವ್ಯಯಿಸಿರಿ ನಿಮಗೆ ನೀವೇ ಅನಾಹುತ ತಂದುಕೊಳ್ಳಬೇಡಿರಿ. (2–195) ದಾಸೋಹ ಪ್ರಜ್ಞೆಯ ಮೂಲಕ ಕಾಯಕ ತತ್ವವು ಸಮಾಜೋ ಕೌಟುಂಬಿಕ ಅರ್ಥಶಾಸ್ತ್ರವಾಗಿದೆ. . ಶರಣ ಸತಿ ಲಿಂಗಪತಿ ಕಾಯಕ ತತ್ವವು ಸಮಾಜೋ ಕೌಟುಂಬಿಕ ಅರ್ಥಶಾಸ್ತ್ರವಾಗಿದೆ. ಶರಣ ಸತಿ ಲಿಂಗ ಪತಿ ಎಂದು ಹೇಳುವಲ್ಲಿ ಇಡೀ ವಿಶ್ವವನ್ನೇ ಕುಟುಂಬಮಯವಾಗಿ ಮಾಡಿದರು. ಇಂದು ವಿಭಕ್ತ ಕುಟುಂಬಮಯವಾಗಿ ಸಮಾಜ ದುರ್ಗತಿಯನ್ನು ಹೊಂದುತ್ತಲಿದೆ. ದಾನ ಪಡೆಯುವವರು ದೈನ್ಯಭಾವ ತಾಳುತ್ತ ಕೊಡುವವರು ಅಹಂಕಾರಿಗಳಾಗುತ್ತಿದ್ದರು. ಆದ್ಧರಿಂದ ಬಸವಣ್ಣನವರು ದಾನ ಪದ್ಧತಿಯ ಬದಲಾಗಿ ದಾಸೋಹ ಪದ್ಧತಿಯನ್ನು ತಂದರು ಹೀಗಾಗಿ ಆಗ ಬೇಡುವವರು ಸಿಗದಂತಾಗಿ ಕೊಡುವವರು ಬಡವರಾಗುತ್ತಿದ್ದರು. ಬಸವಣ್ಣನವರ ಪರ್ಯಾಯ ಸಮಾಜದಲ್ಲಿ ಇರುವಿಕೆಯ ಭೌತಿಕ ಪ್ರಕ್ರಿಯೆಯಾದರೆ ಬದುಕು ;ಆಧ್ಯಾತ್ಮಿಕ ಪ್ರಕ್ರಿಯೆಯಾಗಿದೆ. ಕಾಯಕತತ್ವವು ಅರ್ಥ ಗಳಿಕೆ ಹೇಳಿದರೆ ದಾಸೋಹ ತತ್ವವು ವೈಚಾರಿಕ ಕ್ರಾಂತಿಯ ಅಮೃತ ಫಲಗಳು. ಆದ್ದರಿಂದಲೇ ಬಸವಣ್ಣನವರು ಕಲ್ಯಾಣದಲ್ಲಿ ನೀಡುವವರುಂಟು ಬೇಡುವವರಿಲ್ಲ ವೆಂದು ಹೇಳುತ್ತಾರೆ. ಮಾನವ ಅನುಕಂಪವಿರುವ ಎಲ್ಲರ ಎದೆಯಲ್ಲಿ ಶಾಶ್ವತವಾಗಿನಿಲ್ಲ ಬೇಕಾಗಿರುವ ಕಾಯಕ, ದಾಸೋಹ ಇಂದಿನ ಸ್ವಾರ್ಥಪರ ಜೀವನದಲ್ಲಿ ಎಲ್ಲಿವೆ: ಎಲ್ಲರೂ ತಮಗಾಗಿ ತಮ್ಮ

ಮಕ್ಕಳಿಗಾಗಿ ಮಂದಿನ ಪೀಳಿಗೆಗಾಗಿ ಗಳಿಸಿಡ ಬೇಕೆನ್ನುವ ಸ್ವಾರ್ಥಿಗಳೇ.

ಬಸವಣ್ಣವರ ಬದುಕಿನ ಕ್ರಮ, ಚಿಂತನೆ, ಸಾಮಾನ್ಯ ಜನರ ಬದುಕನ್ನು ಕಟ್ಟಲು ಶ್ರಮಿಸಿದ್ದು, ನಿರಾಕಾರ ತತ್ವದೆಡೆಗೆ ಪಯಣಿಸಿದ್ದು ಗಮನಾರ್ಹ. ಆದುದರಿಂದಲೇ ಬಸವಣ್ಣನವರು ಕಟ್ಟಿದ್ದು ಮತವನ್ನಲ್ಲ ಅನುಭವಂಟಪವನ್ನು ವ್ಯಕ್ತಿಯೊಬ್ಬ ಸ್ವಾವಲಂಬನೆಗೆ ಸಂಬಂಧಿಸಿದಂತೆ ತನ್ನ ಜೀವನ ನಿರ್ವಹಣೆಗೆ ಒಂದು ಕೆಲಸ ಮಾಡಬೇಕು ಆರ್ಥಿಕ ನೆಲೆ, ನ್ಯಾಯ ಕೊಡುವ ಯಾವುದಾದರೂ ಕೆಲಸ ಮಾಡಬೇಕು. ಶ್ರಮ ಗೌರವ, ಉದ್ಯೋಗ ಶೀಲತೆ, ಮಾನವನ ಸಹಜ ಪ್ರವೃತ್ತಿಯಾಗಬೇಕು. ಮುಂದುವರಿದು ಫಾತಿಮಾ ಹೇಳುತ್ತಾಳೆ.

*ದುಡಿದುಡಿದು ತಾ ದೊಡ್ಡಾಂವ ಆದ।*
*ದುಡಿಲಾಕ ಹಚ್ಚಿ ತಾ ಅಲ್ಲಾನೇ ಆದ*
*ಸೋಮಾರಿ ಬೆನ್ನಿಗೆ ಚಬಕಿಲೆ ಹೊಡೆದ*
*ಹೊಡೆದು ಬೆನ್ನಿಗೆ ಮಲಾಮು ಸವರಿದ॥*

ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ ಎಂದು ಹೇಳುವ ಮೂಲಕ ಕಾಯಕ ತತ್ವದ ಪ್ರಕಾರ ಸ್ವಂತ ದುಡಿಮೆ ಹೊರತಾದ ಧನವು ಕಸಕ್ಕಿಂತಲೂ ಕಡೆ. ಬೇಡುವ ಪ್ರವೃತ್ತಿ ಅತ್ಯಂತ ಹೀನವಾದುದು. ಪ್ರತಿಯೊಬ್ಬ ವ್ಯಕ್ತಿ ದುಡಿದು ತನ್ನ ದುಡಿಮೆಯಿಂದಲೇ ಬದುಕಬೇಕು. ಬೇರೆಯವರನ್ನು ಅವಲಂಬಿಸಿ ಬದುಕಬಾರದು. ಸಾಮಾಜಿಕ ಉದ್ದೇಶವಿರುವ ಸಂಪತ್ತಿನ ಉತ್ಪಾದನೆಗೆ ನೆರವಾಗುವ ಬೌದ್ಧಿಕ ಮತ್ತು ದೈಹಿಕ ಶ್ರಮವನ್ನು ಬಸವಣ್ಣ ಕಾಯಕ ಎಂದಿದ್ಧಾರೆ. ಅದು ಪ್ರಾಮಾಣಿಕ ದುಡಿಮೆ ತಾನು ತನ್ನದು ಎಂಬ ಅಹಂಕಾರ ಮಮಕಾರವನ್ನು ತೊರೆದು ಸಮಾಜದ ಒಟ್ಟು ಕ್ಷೇಮಕ್ಕಾಗಿ ಎಲ್ಲರೂ ಯತ್ನಿಸಬೇಕು ಎಂದರು ಫೈಮುದಾ ಫಾತಿಮಾ.

*ಉಳ್ಳವರು ಶಿವಾಲಯ ಕಟ್ಟುವರು ನಾನೇನು ಮಾಡಲಿ ಬಡವನಯ್ಯ॥*
*ಎನ್ನ ಕಾಲೇ ಕಂಬ, ದೇಹವೇ ದೇಗುಲ ಶಿರವೇ ಹೊನ್ನ ಕಳಶವಯ್ಯ॥*
*ಕೂಡಲ ಸಂಗಮದೇವ ಕೇಳಯ್ಯ*
*ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ॥*

ಎನ್ನುವ ವಚನಕ್ಕೆ ಸಂವಾದಿ ಎಂಬಂತೆ ಫಾತಿಮಾಳು ದೃಶ್ಯ ಮತ್ತು ಅದೃಶ್ಯ ಜ್ಞಾನಿ ಅಲ್ಲಾಹನಾಗಿದ್ದಾನೆ ಆದುದರಿಂದ ಅವನು ಅತ್ಯುನ್ನತನಾಗಿರುತ್ತಾನೆ. ಕುರಾನ್ ಅಲ್–ಮುಹ್ ಮಿನೂನ್ 23:92 ಎನ್ನುತ್ತಾ ಬಸವಣ್ಣನ ವಚನವನ್ನು ಪುನರುಚ್ಚಿಸುತ್ತಾಳೆ. ಕುರಾನ್ ಧರ್ಮಗ್ರಂಥದದಲ್ಲಿ ಹೇಳಿರುವ ಈ ಮುಂದಿನ ಸಾಲುಗಳು ಬಸವಣ್ಣನ ವಚನಗಳು ಹಾಗೂ ಫಾತಿಮಾ ತತ್ವಪದದ ಚಿಂತನೆಗಳು ಬಸವಣ್ಣ ಮತ್ತು ಅಲ್ಲಾಹರನ್ನು ಒಂದೇ ನಾಣ್ಯದ ಎರಡು ಮುಖಗಳಂತೆ ತೋರಿಸುತ್ತದೆ. ಸಹನಶೀಲರನ್ನೇ ಅಲ್ಲಾಹನು ಪ್ರೀತಿಸುತ್ತಾನೆ ಕುರಾನ್3:146 ನ್ಯಾಯ ಪಾಲಿಸಿರಿ ಖಂಡಿತವಾಗಿಯೂ ನ್ಯಾಯ ಪಾಲಿಸುವವರನ್ನಯು ಅಲ್ಲಾಹ್ ಪ್ರೀತಿಸುತ್ತಾನೆ.

ಕುರಾನ್ 49:9 ಸತ್ಕರ್ಮಗೈಯ್ಯಿರಿ ಸತ್ಕರ್ಮಗೈಯ್ಯುವವರ್ನು ಅಲ್ಲಾಹು ಪ್ರೀತಿಸುತ್ತಾನೆ. ಕುರಾನ್ 5;93 **ಕುರಾನ್ ಧರ್ಮ ಗ್ರಂಥದ ಈ ಸಾಲುಗಳಲ್ಲಿ ಬಸವಣ್ಣನವರ ವಚನಗಳ ಸಾಮ್ಯತೆಯನ್ನು ಕಾಣಬಹುದು**

*ದಯವಿಲ್ಲ ಧರ್ಮವಾವುದಯ್ಯಾ?*
*ದಯವೇ ಬೇಕು ಸಕಲ ಪ್ರಾಣಿಗಳಲ್ಲಿಯೂ*
*ದಯವೇ ಧರ್ಮದಮೂಲವಯ್ಯಾ*
*ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ॥* ಎಂಬ *ವಚನವು*

*ಅಲ್ಲಾ ಹೊರಗಿಲ್ಲ ಒಳಗ್ಹಾನ ಅಂದ।*
*ಮಂದಿರ ಮಸೀದಿ ಒಡಕೋತ ನಡದ*
*ದ್ಯಾಹಕ ಮಂದಿರ ಮಾಡಿಯೇ ಬಿಟ್ಟ*
*ಅಲ್ಲಾಗ ಅದರೊಳಗ ಹುಡುಕಿ ಕೊಟ್ಟ॥*

ಫಾತಿಮಾಳ ಈ ತತ್ವಪದವು ಆಡಂಬರದ ಪೂಜೆಗಳಲ್ಲಿ ದೇವರಿಲ್ಲ. ದೇವರಿರುವುದು ಅಂತರಂಗದಲ್ಲಿ ಎಂಬುದನ್ನು ತಿಳಿಸುತ್ತಾಳೆ. ತನ್ನ

ಧರ್ಮದ ಅಲ್ಲಾಹನನ್ನು ಅಂತರಂಗದಲ್ಲಿ ಕಾಣಿಸಿದ ದೇವರು ಬಸವಣ್ಣನೆನ್ನುತ್ತಾಳೆ.

*ಇವನಾರವ ಇವನಾರವ ಇವನಾರನ ನೆಂದಿಸದಿರಯ್ಯಾ॥*
*ಇವ ನಮ್ಮವ ಇವ ನಮ್ಮವ ಇವ ನಮ್ಮವ ನೆಂದೆನಿಸಯ್ಯಾ॥*
*ಕೂಡಲಸಂಗಮದೇವಾ ನಿಮ್ಮ ಮಹಾಮನೆಯ ಮಗೆಂದೆನಿಸಯ್ಯಾ॥*

ಬಸವ ಯುಗವನ್ನು ಸ್ವಾತಂತ್ರ್ಯ ಯುಗವೆಂದೂ ಕ್ರಾಂತಿಯುಗವೆಂದೂ, ಅಂಧಶ್ರದ್ಧೆಯು ಹೋಗಿ ಸವತಂತ್ರವಾಗಿ ಆಲೋಚಿಸುವುದು ಪ್ರಾರಂಭವಾದುದರಿಂದ ಅದನ್ನು ಸ್ವಾತಂತ್ರ್ಯವೆನ್ನುವರು ಧರ್ಮಾಧರ್ಮವೆಂಬುದನ್ನು ಅಂಧಶ್ರದ್ಧೆಯಿಂದ ನಿರ್ಧರಿಸದೆ, ಅದರ ನಿರ್ಧಾರಕ್ಕೆ ಸ್ವತಂತ್ರ ಪರ್ಯಾಲೋಚನೆಯ ಅವಕಾಶವು ಉಂಟಾದುದರಿಂದ ಧರ್ಮಕ್ರಾಂತಿಯಾಗಿ ಆ ಕಾಲವು ಕ್ರಾಂತಿಯುಗವೆನಿಸಿಕೊಂಡಿತು. ಬಸವೇಶ್ವರನು ಸಂಗಮದಿಂದ ಬಂದುದೇ ಜನರನ್ನು ತಿದ್ದುವ ಸಲುವಾಗಿ, ಹೀಗೆ ಮಾಡಲು ಪ್ರಾರಂಭಿಸಲು ಕೆಲವು ಕಾಲ ಹಿಡಿದಿರಬೇಕು ಜಾಣರಿಗಾದರೂ ಬಸವೇಶ್ವರನ ವಾದವನ್ನು ಕೇಳುವಷ್ಟು ಪ್ರಭಾವವುಂಟಾಗಲು ಸ್ವಲ್ಪ ಕಾಲವಾಗಿರಬೇಕು. ದೇವನೊಬ್ಬ ನಾಮ ಹಲವು ಯಜ್ಞಯಾಗಾದಿಗಳು ಹಿಂಸಾತ್ಮಕವಾದುವು. ನೀತಿಬಾಹಿರವಾದವು, ದಯವಿಲ್ಲದ ಧರ್ಮವಾವುದಯ್ಯ ಎಂದು ಬಸವೇಶ್ವರನು ಸಾರಿ ಬ್ರಾಹ್ಮಣರು ಮಾತ್ರ ವೇದ ಮಂತ್ರ ದಿಂದ ಪೂಜಿಸಬಹುದು ಎಂಬ ವಿಧಿಯನ್ನು ತಪ್ಪಿಸಿ ಜಾತಿತಾರತಮ್ಯವನ್ನು ತೊಡೆದು ಹಾಕಿದನು. ಸತ್ಯ ನುಡಿಯುವುದೆ ದೇವಲೋಕ ಮಿತ್ಯವ ನುಡಿಯುವುದೆ ಮೃತ್ಯು ಲೋಕ ಆಚಾರವೇ ಸ್ವರ್ಗ ಅನಾಚಾರವೇ ನರಕ ಕೂಡಲಸಂಗಮದೇವಾ ನೀವೇ ಪ್ರಮಾಣು ದೇವ ಸಹಿತ ಮನೆಗೆ ಬಂದಡೆ ಕಾಯಕವಾವುದೆಂದು ಬೆಸಗೊಂಡಡೆ ನಿಮ್ಮಾಣೆ ನಿಮ್ಮ ಪುರಾತರಾಣೆ ತಲೆದಂಡ ತಲೆದಂಡ ತಲೆದಂಡ ಕೋಡಲಸಂಗಮದೇವಾ ಎನ್ನವ ಬಸವಣ್ಣನವರ ವಚನದ ಹೇಳಿಕೆಯು ಫಾತಿಮರ ನಿಲುವನ್ನು ಬದಲಾಯಿಸಿದಂತಿದೆ.

*ಕಲ್ಯಾಣ ಊರಾಗ ಫಾತಿಮಾ ದೊಡ್ಡಾಕಿ*
*ಫಾತಿಮಾ ಒಳಗ್ಹರಾ ಬಸವಣ್ಣ ಅಲ್ಲಾ ಕಾಣಿರೋ॥*

ಫೈಮುದಾ ಫಾತಿಮಾ ಅನ್ಯ ಧರ್ಮೀಯಳು ಆದರೆ ಅವಳ ತತ್ವಪದದಲ್ಲಿ ಬಸವಣ್ಣನ ಪ್ರಭಾವ ಸಾಕಷ್ಟಿದೆ. ತನ್ನ ಧರ್ಮದ ತತ್ವವನ್ನು ಬಸವಣ್ಣನ ಶರಣ ತತ್ವದಲ್ಲಿ ಕಂಡಿದ್ದಾಳೆ. ಬಸವಣ್ಣನವರು ಸಾಮಾಜಿಕ ಮನೋವಿಜ್ಞಾನಿ ಅರ್ಥಶಾಸ್ತ್ರಜ್ಞರು ಮತ್ತು ಬದುಕಿನ ಎಲ್ಲಾ ರಂಗಗಳಲ್ಲಿಯೂ ಮಹಾ ಜ್ಞಾನಿಯೂ ಮಹಾದಾರ್ಶನಿಕರೂ ಆಗಿದ್ದರು. ಬಸವಣ್ಣನವರ ಈ ವೈಚಾರಿಕ ಕ್ರಾಂತಿಯು ದೇವರು ಧರ್ಮಗಳಿಗೆ ಮಾತ್ರ ಸೀಮಿತವಾಗಿರದೇ ಆರ್ಥಿಕ ಕ್ಷೇತ್ರದಲ್ಲಿಯೂ ಅದು ಅದ್ಭುತ ಪರಿವರ್ತನೆಯ್ನುಂಟು ಮಾಡಿತು. ಕಾಯಕವೇ ಕೈಲಾಸವೆಂಬ ವಿನೂತನ ತತ್ವಕ್ಕೆ ಜನ್ಮ ನೀಡಿತು. ಕಾಯಕವು ಸಂಪಾದನೆಯ ಸಾದನವಲ್ಲ ಅಲ್ಲಿ ದುರಾಸೆಗೆ

ಅವಕಾಶವಿಲ್ಲ, ಸಂಗ್ರಹ ಬುದ್ಧಿಗೆ ಎಡೆಯಿಲ್ಲ, ಸುಲಿಗೆಗೆ ಸ್ಥಾನವಿಲ್ಲ, ಅವಶ್ಯಕತೆ ಇದ್ದಷ್ಟು ಪ್ರತಿಫಲ ಕಾಯಕವು ಸರ್ವರಿಗೂ ಕಡ್ಡಾಯ ಶುದ್ಧಕಾಯಕದಿಂದ ಸಂಪಾದಿಸಿದ್ದು ಮಾತ್ರ ದಾಸೋಹಕ್ಕೆ ಸಲ್ಲುತ್ತದೆ. ಜಂಗಮ ದಾಸೋಹ ಮಾಡದೇ ಲಿಂಗಪೂಜೆ ಪೂರ್ಣವಾಗಲಾರದು. ಕ್ರಿಯಾಸಾರದಲ್ಲಿ ಹೇಳಿದಂತೆ ಎಲ್ಲರೂ ಒಂದೇ ತರಹದ ಲಿಂಗವನ್ನು ಒಂದೇ ರೀತಿಯಲ್ಲಿ ಪೂಜಿಸುವ ಪದ್ಧತಿಯನ್ನು ಬಸವೇಶ್ವರರು ರೂಢಿಗೆ ತಂದರು

*ಬಸವಣ್ಣನೇ ಅಲ್ಲಾ ನೋಡು*
*ಕೇಳಕೋತ ಬರಿತಿನಿ ಈ ಪದ*
*ಹಾಡಿ ಹಿಡಿರಿ ಅವನ ಮಾತಿನ ಹದ॥*

ವಚನ ಸಾಹಿತ್ಯದಲ್ಲಿ ಬಸವಣ್ಣನವರ ವಚನಗಳು ಒಂದು ಅನನ್ಯವಾದ ಬತ್ತಲಾಗದ ಸರೋವರ ಆಧ್ಯಾತ್ಮಿಕತೆ ಸಮಾಜ ಸುಧಾರಣೆ ಅನುಭಾವದ ಆಳವಾದ ಚಿಂತನೆಯನ್ನು ಒಳಗೊಂಡಿದೆ.

ಆತ್ಮಶೋಧನೆ ಇದರ ತಳಹದಿ. ಅಂತರಂಗ ಶುದ್ಧಿ ಮತ್ತು ಆತ್ಮ ಸಾಕ್ಷಾತ್ಕಾರವು ಏಕ ದೇವರನ್ನು ತಿಳಿಸಿ ಜಾತಿ, ವರ್ಣ, ಲಿಂಗಭೇದವನ್ನು ವಿರೋಧಿಸಿ ಕಪಟ ಧಾರ್ಮಿಕ ಆಚರಣೆಗಳನ್ನು ವಿರೋಧಿಸುತ್ತದೆ. ಬಸವಣ್ಣನವರ ವಚನಗಳು ಧರ್ಮದಲ್ಲಿ ಬಾಹ್ಯ ಆಚರಣೆಗೆ ಬದಲಾಗಿ ಆಂತರಿಕ ಅನುಭವದ ಮೇಲೆ ಭಕ್ತಿಯ ಪ್ರತಿಷ್ಠಾಪನೆ ಮಾಡುತ್ತದೆ. ಒಟ್ಟಿನಲ್ಲಿ ಬಸವಣ್ಣನವರ ವಚನಗಳು ಅವರ ಸಾಮಾಜಿಕ ಸುಧರಣೆಗಳು ಭಾರತೀಯ ಆಧ್ಯಾತ್ಮಿಕತೆಗೆ ಮತ್ತು ಸಾಹಿತ್ಯ ಪರಂಪರೆಗೆ ಒಂದು ಅಮೂಲ್ಯ ಕೊಡುಗೆ 12ನೇ ಶತಮಾನದ ಬದಲಾವಣೆ 20ನೇ ಶತಮಾನದ ಅನಕ್ಷರಸ್ಥ ಫಾತಿಮಾಳನ್ನು ಬದಲಾವಣೆ ಮಾಡಿದೆ ಎಂದರೆ ಬಸವಣ್ಣನವರ ಪ್ರೇರಣೆಗೆ ಒಳಗಾದವರೆ ಇಲ್ಲವೆಂದೇಳಬಹುದು.

ದೇವಲೋಕ ಮೃತ್ಯು ಲೋಕವೆಂಬುದು ಬೇರಿಲ್ಲ, ನಮ್ಮ ದೇಶ ಸಾವಿರಾರು ವರ್ಷಗಳಿಂದ ಕೃಷಿ ಪ್ರಧಾನವಾದ ದೇಶ ರೈತಾಪಿ ವರ್ಗವೇ ಪ್ರಧಾನ ಜನಸಮುದಾಯವುಳ್ಳ ನಾಡು ನಮ್ಮದು. ಇಂತಹ ನಾಡಿನಲ್ಲಿ ಹನ್ನೆರಡನೇ ಶತಮಾನದಲ್ಲಿ ಕಾಯಕ ತತ್ವವನ್ನು ಅರಿತು ಪಾಲಿಸಿ ಜಾತಿ ರಹಿತ ವರ್ಗ ರಹಿತ ಸಮಾಜ ನಿರ್ಮಾಣದ ಸಂಕಲ್ಪಕ್ಕೆ ಮುಂದಾಗಿದ್ದುದು ಮಾದರಿಯ ಸಂಗತಿ. ಶರಣರರು ತಮ್ಮ ನಡವಳಿಕೆಯಲ್ಲಿ ಕ್ರಿಯಾಶೀಲತೆಯನ್ನು ಶರಣರ ಕಾಯಕದ ಪರಿಕಲ್ಪನೆಯಲ್ಲಿ ದಾಸೋಹದ ಕಟ್ಟಳೆಯೂ ಇದೆ. ಅಂದರೆ ಕಾಯಕ ಮತ್ತು ದಾಸೋಹಗಳು ಒಂದೇ ನಾಣ್ಯದ ಎರಡು ಮುಖಗಳು ಹಾಗಾಗಿ ಕಾಯಕ ಪ್ರಮಾಣಿಕವಾಗಿರಬೇಕು. ಕಾಯಕದಿಂದ ಬಂದದ್ದು ಸಮಾಜಕ್ಕೆ ಸಲ್ಲಿಸಬೇಕು ಶರಣರ ದಾಸೋಹ ದಾನಕ್ಕಿಂತಲೂ ಭಿನ್ನವಾದದ್ದು ವಿಚಾರವಾಗಿದೆ. ವ್ಯಕ್ತಿಯಲ್ಲಿ ನೈತಿಕತೆಯನ್ನೂ ಹೆಚ್ಚಿಸುವ ಕಾಯಕತತ್ವ ಗಹನತೆಯನ್ನು ಬದುಕಿನ ಉದ್ದಗಲಕ್ಕೂ ವಿಸ್ತರಿಸಿ ವೈಚಾರಿಕ ಕ್ರಾಂತಿಗೆ ಕಾರಣವಾಗಿರುವುದು. ಬಸವಕಲ್ಯಾಣದಲ್ಲಿ ಜನಿಸಿದ ಫೈಮುದಾ ಫಾತಿಮಾಳು ಅಲ್ಲಿನ ಸೂಫಿ ತತ್ವಪದಕಾರರ ಪ್ರಭಾವ ಬೀರಿರಬಹುದು ಆದ್ದರಿಂದಲೇ ಆಕೆ ಅಲ್ಲಾಹನನ್ನು ಬಸವಣ್ಣನವರನವರಲ್ಲಿ ಕಂಡಿದ್ದಾಳೆ ಪ್ರಾರ್ಥನೆಯನ್ನು ವೈಚಾರಿಕವಾಗಿ ಪರಾಮರ್ಶಿಸಿದ್ದಾಳೆ.

**ಪರಾಮರ್ಶನ ಗ್ರಂಥಗಳು**


- *ಬಸವ ಕಲ್ಯಾಣದ ಫೈಮುದಾ ಫಾತಿಮಾ.* (2024, ಏಪ್ರಿಲ್ 25) ವಿಜಯ ಕರ್ನಾಟಕ.
- ಎಲ್ಲಪ್ಪ ಟಿ.ಎನ್. (1986). *ಬಸವೇಶ್ವರರ ಸಮಕಾಲೀನರು.* ಬಸವ ಸಮಿತಿ.
- ಗಂಗಾಧರ ಬಿ.ಎಂ. (2018). *ವಚನ ಸಾಹಿತ್ಯದಲ್ಲಿ ಕಾಯಕದ ಪರಿಕಲ್ಪನೆ.* ಕನ್ನಡ ವಿಭಾಗ, ಹಾಸನ ಸರ್ಕಾರಿ ಹೋಮ್ ಸೈನ್ಸ್ ಕಾಲೇಜು.
- ನೀಲಾ.ಕೆ. (2019). *ಕನ್ನಡ ತತ್ವಪದಕಾರ್ತಿಯರ ವಾಚಿಕೆ.* ಕುವೆಂಪು ಭಾಷಾ ಭಾರತಿ ಪ್ರಾಧಿಕಾರ.
- ಶೀಲಾದೇವಿ ಎಸ್. ಮಳೀಮಠ. (ಸಂ.) (2019). ಜಗದಗಲ ಮಂಟಪ ಸಂಶೋಧನಾ ಮೀಮಾಂಸೆ (ಸಂಶೋಧನ ಲೇಖನಗಳ ಸಂಗ್ರಹ) ಸುಭಾಷ್ ಸ್ಟೋರ್ಸ್.
- *ವಚನ ಸಾಹಿತ್ಯ: ಬಹುಮುಖಿ ಅಧ್ಯಯನ ನೆಲೆಗಳು ಸಂಪುಟ: 01. (2018).* ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ ಮಂಡನೆಯಾದ ಪ್ರಬಂಧಗಳು.
- ವಾರ್ತಾ ಭಾರತಿ ಪತ್ರಿಕೆ. (2023, ಸೆಪ್ಟೆಂಬರ್ 31) ಬಸವ ಕಲ್ಯಾಣದ ಫೈಮುದಾ ಫಾತಿಮಾ ಬಗ್ಗೆ ಪ್ರಕಟಗೊಂಡ ಲೇಖನ.
- ವೀರಣ್ಣ ದಂಡೆ. (ಸಂ.) (2021). *ವ್ಯಕ್ತಿತ್ವ ವಿಕಸನ ವಚನ ಚಿಂತನೆಗಳು.* ಬಸವ ಸಮಿತಿ.
- ವಿರೂಪಾಕ್ಷಪ್ಪ, ಬಿ. (2006). *ಶರಣ ವಿವೇಚನೆ ತತ್ವಭಾಗ–3.* ಬಸವ ಸಮಿತಿ.
- ವಿರೂಪಾಕ್ಷಪ್ಪ, ಬಿ. (ಸಂ.) (1993). *ಶರಣ ತತ್ವ ವಿವೇಚನೆ ಭಾಗ–1.* ಬಸವ ಸಮಿತಿ.